ಜಪಿಸುತ ಆ ಮೂಲಮಂತ್ರವ ನಾನೀಗ ಹೃತ್ಪದ್ಮದಲ್ಲಿಹ ಲಕ್ಷ್ಮೀಶಗೆ ಧ್ಯಾನಿಸುವೆ
ಉಪಚಾರದಿಂದಲಿ ಪೀಠದ ಪ್ರತಿಮೆಗೆ “ ನಿನ್ನನ್ನಾವಾಹಿಪೆ ” ಎನ್ನುತಲಿ
ಪ್ರಾರ್ಥಿಸಿ ನಾನಿನ್ನು “ ಏಹ್ಯೇಹಿ ” ಎನ್ನುತ್ತ ಆವಾಹನಾದಿ ಆ ಮುದ್ರೆಯ
ಅರ್ತಿಯಿಂ ಆ ಮೂಲಮಂತ್ರದಿಂ ತೋರಿಸಿ ಸ್ವಬಿಂಬನನ್ನೀಗ ಆವಾಹಿಪೆ
ಈ ಪೂಜೆ “ ಯಾಗವು ” ಇದು ಮುಗಿವತನಕ ನೀ ಈ ಪ್ರತಿಮೆಯಲ್ಲಿರು ಜನಾರ್ದನ
ಈ ಪೂಜೆ ಕೊಂಡು ನೀ ಭಕ್ತನೆಂದೆನ್ನನು ಬಿಡದಂತೆ ಶ್ರೀಹರಿ ಪಾಲಿಪುದು
ಆವಾಹನ ಸ್ಥಾಪನ ಸನ್ನಿಧಿ ಸನ್ನಿರೋಧನ ಸಮ್ಮುಖೀಕರಣಂಗಳ
ಅವಗುಂಠನವೆಂಬ ಆರ್ಮುದ್ರೆ ತೋರಿಸಿ ಸ್ನಾನಕೆ ಏಳೆಂದು ಬೇಡುವೆನು
ಇತರರ ಪರವಾದ ಪೂಜೇಲಿ ಸೂರ್ಯನ ಒಳಗಣ ಹರಿಯ ಆವಾಹಿಪೆ
ರಾತ್ರಿಲಿ ಆ ಶುಕ್ಲಪಕ್ಷದಿ ಚಂದ್ರನ ಅಗ್ನಿಯ ಆ ಕೃಷ್ಣಪಕ್ಷದಲಿ
ಒಳಗಣ ಶ್ರೀಹರಿಯ ಆವಾಹಿಸುತ್ತೀಗ ನಾ ಮುದದಿಂದಲೆಲ್ಲ ಮುದ್ರೆಗಳ
ನಳಿನಾಕ್ಷ ಶ್ರೀಹರಿ ಆತನ ಪೂಜೆಗೆ ತೋರಿಸುತ್ತಿನ್ನಲ್ಲಿ ಪೂಜಿಸುವೆ
ಈಪರಿ ಸ್ನಾನಕೆ ಏಳೆಂದು ಶ್ರೀಹರಿಯ ಪ್ರಾರ್ಥಿಸಿ ಸ್ನಾನದ ಮನೆಗೊಯ್ಯೆ
ನಾ ಪಾದುಕದ್ವಯ ಅರ್ಪಿಪೆ “ ಇದಂ ವಿಷ್ಣುರ್ವಿಚಕ್ರಮೇ ” ಎಂಬ ಋಙ್ಮಂತ್ರದಿ
ಸ್ನಾನದ ಮನೆಗಿನ್ನು ಬಂದಂಥ ಆ ನಾರಾಯಣನನ್ನೆ ನಾನೀಗ ಧ್ಯಾನಿಸುತ
ಸ್ನಾನದ ಪೀಠದಿ “ ಭದ್ರಂ ಕರ್ಣೇಭಿಃ ” ಋಙ್ಮಂತ್ರದಿಂದಲಿ ಸ್ಥಾಪಿಸುವೆ
ಧ್ಯಾನಿಸುತಾತನ ಆ ಮೊದಲ್ತೋರಿದ ಆರ್ಮುದ್ರೆ ಮತ್ತೀಗ ತೋರಿಸುತ
“ ಸ್ನಾನಕೆ ದೇವನೆ ಬೇಗ ನೀನೇಳಯ್ಯ ” ಎನ್ನುತ್ತ ಭಕ್ತಿಯಿಂ ಪ್ರಾರ್ಥಿಸುವೆ

## ಅರ್ಘ್ಯ, ಪಾದ್ಯ, ಇತ್ಯಾದಿ ಉಪಚಾರ

ಜಪಿಸುತ ನಾ ಮೂಲಮಂತ್ರವ ಹರಿಗೆ ಅರ್ಘ್ಯವ, ಪಾದ್ಯವ, ಆಚಮನವ
ಅರ್ಪಿಸುತಲವನ್ನೆಲ್ಲ, ಒಪ್ಪಿಸೆ ಮಧುಪರ್ಕ ನಾನೀಗ ಬೇಗನೆ ತೊಡಗುವೆ
ಒಪ್ಪಿಸುತಲಿರುವೆನು ಕೈ-ಮುಖ ತೊಳೆಯಲು ಅರ್ಘ್ಯವನಿದನು ಆತನಿಗೆ
ಅಪ್ಪ ನಾರಾಯಣ, ಹೆಚ್ಚಿನ ಹೆದ್ದೈವ, ಸ್ವಚ್ಛನೆ ಸುಂದರನೆ ಎನ್ನುವೆನು
ಕೊಡುವಳು ಈ ಅರ್ಘ್ಯ ಸಾಕ್ಷಾತ್ತು ಶ್ರೀರಮೆ, ಎನ್ನುತ ಭಾವಿಸಿ ನೀಡುತಿಹೆ
ಹಿಡಿಯುತ ಆದನೀಗ ಮಾಡು ಸಂಮಾರ್ಜನೆ ಸಡಗರ ದೈವವೆ, ಶ್ರೀಹರಿಯೆ
ಪಾದ್ಯವನಿದನೀಗ ಕಾಲ್ಗಳ ತೊಳೆಯಲು ದೇವಿ ಸರಸ್ವತಿ ಇತ್ತಿಹಳು
ಆದ್ಯ-ಸಂಕರ್ಷಣ, ಈ ಭಾವ ಒಪ್ಪುತ ಕಾಲ್ಗಳ ತೊಳೆಯಲು ಬಾರಯ್ಯ ನೀ

